Sri H. SIDDAVEERAPPA.—I leave it to the House to judge.

Sri J. MOHAMED IMAM.—Would not the Government feel that such frivolous report is only to shield this?

Sri H. SIDDAVEERAPPA.—In fact the allegations are more frivolous than the report.

Cement Concreting Bangalore-Mangalore Road near Chennarayapatna.

Q.—13. Sri K. LAKKAPPA (Chennarayapatna).—

Will the Government be pleased to state :—

(*a*) whether the Municipality of Chennarayapatna requested the Government to cement-concrete the portion of Bangalore-Mangalore road which passes through the town area of Chennarayapatna;

(*b*) what action they have taken in the matter?

A.—Sri Kadidal MANJAPPA (Minister for Revenue and Public Works).—

(*a*) Yes

(*b*) The estimate is under consideration.

ಶ್ರೀ ಕೆ. ಲಕ್ಕಪ್ಪ.—ಸಿಮೆಂಟ್ ಕಾಂಕ್ರೀಟ್ ಹಾಕಿನ ಬೇಕೆಂದು ತಯಾರುಮಾಡಿರುವ ಅಂದಾಜಿನಲ್ಲಿ ಎಷ್ಟು ಮೈಲಿ ಪ್ರದೇಶಕ್ಕೆ ಸಿಸೆಂಟ್ ಕಾಂಕ್ರೀಟ್ ಮಾಡ ಬೇಕೆಂದು ಹೇಳಿದೆ?

ಶ್ರೀ ಕಡಿದಾಳ್ ಮಂಜಪ್ಪ.—13 ಫರ್ಲಾಂಗು ಗಳಿಗೆ.

ಶ್ರೀ ಕೆ. ಲಕ್ಕಪ್ಪ.—ಸಿಮೆಂಟ್ ಕಾಂಕ್ರೀಟ್ ಮಾಡಲು ಮುನಿಸಿಪಾಲಿಟಿಯವರು ತಮ್ಮ ಕೋಟಾ ಕೊಡಬೇಕೆಂದು ಅವರನ್ನು ಕೇಳಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಆ ಮುನಿಸಿಪಾಲಿಟಿಯು ಬಹಳ ಬಡತನದಲ್ಲಿರುವುದರಿಂದ ಅದು ತನ್ನ ಕೋಟಾ ಕೊಡಲು ಸಾಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡುವುದಕ್ಕೆ ಸಾಧ್ಯ ವಿಲ್ಲವೆಂದು ಹೇಳಿದ್ದಾರೆ. ಆ ವಿಚಾರ ಪರಿಶೀಲನೆ ಯಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಹೀಗೆ ಸಿಮೆಂಟ್ ಕಾಂಕ್ರೀಟ್ ಹಾಕಿರುವ ಇತರ ಕಡೆಗಳಲ್ಲಿ ಯಾವ ಮುನಿಸಿಪಾಲಿಟಿ ಯಿಂದಲಾದರೂ ಕೋಟಾ ತೆಗೆದುಕೊಂಡಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಮುನಿಸಿ ಪಾಲಿಟಿಗಳನ್ನು ಅವುಗಳ ಕೋಟಾ ಕೊಡಬೇಕೆಂದು ಕೇಳಿದ್ದೇವೆ. ಕೆಲವಕ್ಕೆ ಹಿಂದೆ ಕೋಟಾ ತೆಗೆದು ಕೊಳ್ಳದೆ ಕಾಂಕ್ರೀಟ್ ಮಾಡಿದೆ.

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು-ಮಂಗಳೂರು ರಸ್ತೆ ಹೈವೇ ಆಗಿರುವುದರಿಂದ ಅಂಥ ಕಡೆ ಕೋಟ ಕೇಳದಿರುವುದು ಸೂಕ್ತವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಷಯ ಪರಿಶೀಲ ನೆಯಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಈ ಎಸ್ಟಿಮೇಟ್ ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಎಗ್ಸಿಕ್ಯುಟಿವ್ ಇಂಜಿನಿಯರ ಆಫೀಸಿಗೆ 11-9-54 ರಲ್ಲಿ ಎಸ್ಟಿಮೇಟ್ ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಕೂಡಲೆ ಅದನ್ನು ಮಂಜೂರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಯಾಗು ತ್ತದೆ.

ಶ್ರೀ ಕೆ. ಲಕ್ಕಪ್ಪ.—ಜರೂರಾಗಿ ಅಂದಾಜನ್ನು ಮಂಜೂರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮುನಿಸಿಪಾಲಿಟಿಯ ವರು ಕೋಟಾ ಕೊಡುತ್ತಾರೆಯೆ ಎಂಬುದು ನಿರ್ಧಾರ ವಾಗಬೇಕು. ಅದಾದಮೇಲೆ ಪರಿಶೀಲನುತ್ತೇವೆಂದು ಹೇಳಿದ್ದೇನೆ.

ಶ್ರೀ ಟಿ. ಸಿ. ಬನಪ್ಪ.—ಹಿಂದೆ ಪೌರಸಭೆಯವರು ಕೋಟಾ ಕೊಡುತ್ತಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡುತ್ತಿದ್ದರೆಂದು ಕಾಣುತ್ತದೆ.

ಶ್ರೀ ಟಿ. ಸಿ. ಬನಪ್ಪ.—ಈಚೆಗೆ ಕೆಲವು ಕಡೆ ನಿಲ್ಲಿಸಿದೆ ಯೆಂದು ಹೇಳಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಸಿ. ಬನಪ್ಪ.—ಅಂದಮೇಲೆ ಕಾಂಕ್ರೀಟ್ ಮಾಡುವ ಜವಾಬ್ದಾರಿ ಯಾರದು?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಧ ಸರ್ಕಾರದ್ದು, ಇನ್ನರ್ಧ ಪೌರಸಭೆಯದು ಎಂದು ನಿಯಮವಿದೆ.

ಶ್ರೀ ಟಿ. ಸಿ. ಬನಪ್ಪ.—ಕೆಲವು ಕಡೆ ಕೋಟಾ ಪಡೆ ಯದೆ ಮಾಡಿದಮೇಲೆ ಪುನಃ ಕೋಟಾ ಪಡೆಯಬೇಕಾದ ಸಂದರ್ಭ ಯಾವಾಗ ಬಂತು?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ನೆನಪಿಲ್ಲ.

ಶ್ರೀ ಟಿ. ಸಿ. ಬನಪ್ಪ.—ಈ ರೀತಿ ನೀತಿಯನ್ನು ಪುನಃ ಸರ್ಕಾರ ವಿಮರ್ಶೆಮಾಡಿ ಪೌರಸಭೆಯ ರಸ್ತೆಗಳನ್ನು ಸರ್ಕಾರವೇ ವಹಿಸುವುದು ನ್ಯಾಯವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಮುನಿಸಿಪಲ್ ಸರ ಹದ್ದಿನಲ್ಲಹೋಗುವಸ್ಟೇಟ್‌ಫಂಡ್ ರಸ್ತೆಯನ್ನು ಟಾರು ಮಾಡಲು ಪೌರಸಭೆಯವರನ್ನು ಕೋಟಾ ಕೇಳುವು ದಿಲ್ಲ; ಕಾಂಕ್ರೀಟ್‌ಮಾಡುವಾಗ ಮಾತ್ರ ಅರ್ಧಭಾಗ ಅವರು ವಹಿಸಬೇಕೆಂದು ಒತ್ತಾಯ ಮಾಡಿದ್ದೇವೆ.

ಶ್ರೀ ಟಿ. ಸಿ. ಬನಪ್ಪ.—ಕೆಲವು ಪಟ್ಟಣಗಳಲ್ಲ ಸಿಮೆಂಟ್ ಕಾಂಕ್ರೀಟ್‌ಮಾಡಿದೆ, ಅಲ್ಲಿ ಕೋಟಾ ಕೇಳಿಲ್ಲ ಎಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಹಾಗೆ ಮಾಡಿದ್ದಾರೆಂದು ಆಗಲೇ ಹೇಳಿದೆ.

Culvert across Siddalipura Stream

Q.—30. Sri B. MADHAVACHAR (Bhadravathi).—

Will the Government be pleased to state :—